ದಿನಗಳು ಇದ್ದರೆ ನನ್ನ ಮನಸ್ಸಿನ...'

ಅರುಂಧತಿ ಏನನ್ನೋ ಹೇಳಲು ಪ್ರಯತ್ನಿಸಿದಳು. ಆಗ ಮನೋಹರ ಗಡುಸಾಗಿ 'ಅರು... ನೀನು ಏನೇ ಹೇಳಿದರೂ ಸಹ ಎರಡು ತಿಂಗಳು ಅಲ್ಲಿಗೆ ಕರೆದುಕೊಂಡು ಹೋಗುವುದಿಲ್ಲ. ಅಲ್ಲಿಗೆ ಹೋದರೆ ಮಗುವಿನ ನೆನಪಾಗಿ ನಿನ್ನ ದುಃಖ ಜಾಸ್ತಿಯಾಗುತ್ತದೆ. ಅಲ್ಲದೆ, ನೀನು ಈಗಿರುವ ಪರಿಸ್ಥಿತಿಯಲ್ಲಿ ಸಧ್ಯಕ್ಕೆ ಎಲ್ಲಿಗೂ ಸಹ ಪ್ರಯಾಣ ಮಾಡಬಾರದು.'

ಅರುಂಧತಿಗೆ ತವರುಮನೆಗೆ ಹೋಗಬೇಕು ಎಂಬ ಆಸೆಯಿದ್ದರೂ ಸಹ ಪುನಃ ಕೇಳಲಿಲ್ಲ. ಮನೋಹರ ಅಂದುಕೊಂಡನು. ಈ ದೇಶದಿಂದಲೇ ದೂರ ಹೋಗಬೇಕು. ಹೆಂಡತಿಗೆ ಈ ರಹಸ್ಯ ತಿಳಿಯಬಾರದು. ಇನ್ನು ಯಾವತ್ತೂ ಸಹ ನಾನು ರುದ್ರನಾಗನನ್ನು ನೋಡಬಾರದು.

ದಿನಗಳು ಉರುಳುತ್ತಿವೆ. ಮನೋಹರ ಕೋಟ್ಯಂತರ ರೂಪಾಯಿ ಬೆಲೆಬಾಳುವ ಆಸ್ತಿಯನ್ನೆಲ್ಲಾ ಮಾರಿದನು. ಹೆಂಡತಿಗೆ ಸುಳಿವನ್ನೇ ಕೊಡದಂತೆ ಅಮೆರಿಕಕ್ಕೆ ಹೋಗಲು ವೀಸಾ, ಪಾಸ್‌ಪೋರ್ಟ್ ರೆಡಿ ಮಾಡಿಸಿದ. ಅಮೆರಿಕಕ್ಕೆ ಹೊರಡುವ ಮೊದಲು ತನ್ನ ಅಣ್ಣನನ್ನು ಒಂದೇ ಒಂದು ಸಲ ನೋಡಿಕೊಂಡು ಬರುತ್ತೇನೆ ಎಂದು ಗೋಗರೆದಿದ್ದಳು. ಮನೋಹರ ಒಪ್ಪಿಕೊಂಡಿರಲಿಲ್ಲ. ಏನೇನೋ ಕುಂಟುನೆಪ ಹೇಳಿದ್ದನು. ದಂಪತಿಗಳು ಅಮೆರಿಕಕ್ಕೆ ಪ್ರಯಾಣ ಪ್ರಾರಂಭಿಸಿದರು. ಮನೋಹರ ಅಂದುಕೊಂಡನು ಇನ್ನು ಭಾರತದ ಮಣ್ಣಿನ ಋಣ ಮುಗಿಯಿತು ಅಂತ.

ಅದು ಮಾವಿನ ತೋಪು. ಮರಗಳ ನಡುವಿನ ತಂಪಾದ ನೆರಳಲ್ಲಿ ನಾಡಹೆಂಚಿನ ಸಣ್ಣ ಮನೆ ಇದೆ. ಶಿಷ್ಯ ಮಾಂತ್ರಿಕನ ಮನೆ. ಚಾಪೆಯ ಮೇಲೆ ಮಗುವನ್ನು ಮಲಗಿಸಿದ್ದಾನೆ. ಮುದ್ದಾದ ಮಗು ಆಡುತ್ತಿದೆ. ಮದಂತನಿಗೆ ಮದುವೆ ಆಗಿರಲಿಲ್ಲ. ಅವನು ತುಂಬು ಪ್ರಾಯದ ಯುವಕ. ಪಾಪ... ಈಗಲೇ ಮಗುವನ್ನು ಸಾಕುತ್ತಿದ್ದಾನೆ. ತುಂಬಾ ಸಹನೆಯಿದೆ ಅವನಿಗೆ.

ಮಧ್ಯಾಹ್ನದ ಸಮಯ. ಹೆಜ್ಜೆಗಳ ಶಬ್ದವನ್ನು ಕೇಳಿ ಮದಂತ ತಲೆ ಎತ್ತಿದನು. ಗುರು ಮಾಂತ್ರಿಕ ರುದ್ರನಾಗ. ಎದ್ದು ನಿಂತು ಗೌರವ ಸೂಚಿಸಿ ಒಳಗೆ ಕರೆದುಕೊಂಡು ಬಂದು ಕೂರಿಸಿದನು. ರುದ್ರನಾಗ ಮಗುವಿನತ್ತ ನೋಡಿದನು. ಪೂರ್ಣಚಂದ್ರನಂತಹ ಮುಖ. ಎಲ್ಲಾ ಅರುಂಧತಿಯ ರೂಪ. ತನ್ನ ಸೋದರಮಾವನನ್ನು ಕಂಡು ಕಿಲಕಿಲನೆ ನಗುತ್ತಿದೆ ಮಗು. ಕೋಪ ಬರುತ್ತಿದೆ. ಮುಖ ತಿರುಗಿಸಿಕೊಂಡನು.

ಮದಂತ ದೊಡ್ಡ ಗ್ಲಾಸಿನ ತುಂಬಾ ನಿಂಬೆ ಹಣ್ಣಿನ ಪಾನಕವನ್ನು ಮಾಡಿಕೊಂಡು ಬಂದು ನೀಡಿದನು.

ರುದ್ರನಾಗ ಪಾನಕವನ್ನು ಕುಡಿದು ಮುಗಿಸಿದ ನಂತರ 'ಮದಂತ... ಇವತ್ತು ಅಮಾವಾಸ್ಯೆ. ರಾತ್ರಿ ಸ್ಮಶಾನಕ್ಕೆ ಬಂದುಬಿಡು.' 'ಯಾತಕ್ಕೆ ಗುರುಗಳೆ?'

ರುದ್ರನಾಗನಿಗೆ ಕೋಪ ಬಂದಿತು. ಹಲ್ಲುಗಳನ್ನು ಕಳೆದುಕೊಂಡ ಮೇಲೆ ಅವನ ಮುಖದ ವಿಕಾರತೆ ಜಾಸ್ತಿಯಾಗಿದೆ. ಅವನು ರೇಗುತ್ತಾ 'ಮನೋಹರ... ಕುತಂತ್ರದಿಂದ ನನ್ನ ಸಂಸಾರವನ್ನು ನಾಶ ಮಾಡಿದ್ದಾನೆ. ಅವನ ಮೇಲೆ ನಾನು ಸೇಡು ತೀರಿಸಿಕೊಳ್ಳಬೇಕು.'

ಮದಂತ ಪ್ರತಿಕ್ರಿಯೆ ನೀಡಲಿಲ್ಲ.

ರುದ್ರನಾಗ 'ಮದಂತ ಪೂಜೆಗೆ ಬೇಕಾದ ವಸ್ತುಗಳನ್ನು ನಾನು ಸಿದ್ಧಪಡಿಸುತ್ತೇನೆ. ನೀನು ರಾತ್ರಿ ಬೇಗ ಸ್ಮಶಾನಕ್ಕೆ ಬಂದುಬಿಡು ಎಂದನು. ಮದಂತ ಆಗಲೂ ಸಹ ಮೌನ.

ರುದ್ರನಾಗ ರೇಗುತ್ತಾ 'ಮದಂತ... ಏನಾಗಿದೆ ನಿನಗೆ. ಇದ್ಯಾಕೆ ಕಪ್ಪೆ ನುಂಗಿರುವ ಹಾವಿನ ರೀತಿ ಕುಳಿತಿದ್ದೀಯ. ಮಾತಾಡು... ಏನಾದರೂ ಮಾತಾಡು.'

'ನನ್ನನ್ನು ಕ್ಷಮಿಸಿ ಗುರುಗಳೆ.'

ರುದ್ರನಾಗ ಗಡುಸಾಗಿ 'ಕ್ಷಮೆ... ಯಾಕೆ... ನೀನು ಅಂತಹ ತಪ್ಪನ್ನು ಏನು ಮಾಡಿದ್ದೀಯ?'

ಉತ್ತರಿಸಲಿಲ್ಲ ಮದಂತ.

'ಮಾತಾಡು... ಯಾಕೆ ಈ ರೀತಿ ಇದ್ದೀಯ? ಇಂದು ಏನಾಗಿದೆ ನಿನಗೆ?' ಎಂದರು.

'ನಾನು ಕೈಕರಣ ಮಾಡಲಾರೆ' ರುದ್ರನಾಗ ಕೋಪದಿಂದ 'ಯಾಕೆ...?'

'ಕಾರಣ ಹೇಳಲಾರೆ'

ರುದ್ರನಾಗ ಕೋಪದಿಂದ 'ಅಂದರೆ ನನ್ನ ಮಾತನ್ನು ನೀನು ತಿರಸ್ಕಾರ ಮಾಡುತ್ತಿದ್ದೀಯ?'

ಮದಂತ ವಿನಯದಿಂದಲೇ 'ಅಂತಹ ಉದ್ಧಟತನ ನನ್ನಲ್ಲಿ ಇಲ್ಲ.'

'ಹಾಗಾದರೆ ರಾಗ ಯಾಕೆ ಎಳೆಯುತ್ತಿದ್ದೀಯ?'

'ಅದು... ದು...''

'ಮಾತಾಡು ಮದಂತ'

'ನಾನು... ನಾನು...'

'ಹೂಂ... ಹೂಂ... ಹೇಳು'

ಮದಂತ ಮೆಲ್ಲಗೆ 'ಇವತ್ತು ಈ ಬೆಳಿಗ್ಗೆ ನಾನು ಅಂತಿಮ ತರ್ಪಣ ನೀಡಿದೆ'

ರುದ್ರನಾಗ ಬೆಚ್ಚಿ ಬೀಳುತ್ತಾ 'ಏನಂದೆ...?' ಮದಂತ 'ಇನ್ನು ಮುಂದೆ ನಾನು ಬೇರೆಯವರ ಮೇಲೆ ಕೈಕರಣವನ್ನು ಮಾಡುವುದಿಲ್ಲ'

ಹೌಹಾರಿದನು ರುದ್ರನಾಗ. ಭಯ ಗಾಬರಿಯಿಂದ. 'ಏನು... ಏನಂದೆ?'

ಮದಂತ 'ಎಂತಹ ಪರಿಸ್ಥಿತಿಯಲ್ಲಿಯೂ ಸಹ ಬೇರೆಯವರ ಮೇಲೆ ಕೈಕರಣ ಮಾಡಲಾರೆ'

'ಮದಂತ...'

'ನನ್ನನ್ನು ಕ್ಷಮಿಸಿ ಗುರುಗಳೆ...'

ರುದ್ರನಾಗ 'ನಿನ್ನ ಈ ತೀರ್ಮಾನಕ್ಕೆ ಕಾರಣ ಏನು? ಯಾರನ್ನು ಕೇಳಿ ಇಂತಹ ನಿರ್ಧಾರಕ್ಕೆ ಬಂದೆ?'

ಮದಂತ ವಿನಯದಿಂದಲೇ 'ಕ್ಷಮಿಸಿ... ನನ್ನ ಆತ್ಮಸಾಕ್ಷಿಯನ್ನು ಕೇಳಿ ಇಂತಹ ನಿರ್ಧಾರಕ್ಕ ಬಂದೆ. ನಾನು... ನಾನು...'

'ನಿನ್ನ ನಿರ್ಧಾರಕ್ಕೆ ಕಾರಣವೇನು?'

'ನೀವೇ ಗುರುಗಳೆ'

ಸರ್ಪದ ಹೆಡೆಯನ್ನು ತುಳಿದಂತೆ ಬೆಚ್ಚಿಬಿದ್ದು ದೂರ ಸರಿದನು ರುದ್ರನಾಗ. ತುಸು ಗಾಬರಿಯಿಂದಲೇ 'ಮದಂತ... ನೀನು... ನೀನು ಏನು ಹೇಳುತ್ತಿದ್ದೀಯ?'

ಮದಂತ 'ನನ್ನನ್ನು ಕ್ಷಮಿಸಿ ಗುರುಗಳೆ. ನಿಮ್ಮ ಅಪ್ಪಣೆಯನ್ನು ಪಡೆಯದೆ ನಾನು ಇಂತಹ ನಿರ್ಧಾರಕ್ಕೆ ಬರಬೇಕಾಯಿತು. ನನ್ನನ್ನು ಕ್ಷಮಿಸಿ...'

ರುದ್ರನಾಗ ಕೋಪದಿಂದ 'ಕ್ಷಮಿಸಿ... ಕ್ಷಮಿಸಿ ಅಂತ ಹತ್ತು ಸಲ ಹೇಳಬೇಡ. ನಿನ್ನ ಈ ನಿರ್ಧಾರಕ್ಕೆ ಕಾರಣ ಏನು ಅಂತ ಹೇಳು...'

ಮದಂತ ಮುಖವನ್ನು ಬೇರೆ ಕಡೆ ತಿರುಗಿಕೊಂಡು 'ಗುರುಗಳೆ... ಈ ವಾಮಾಚಾರ ಅನ್ನುವುದು ಪವಿತ್ರವಾದ ವಿದ್ಯೆ. ಅದು ಇರುವುದು ಲೋಕಕಲ್ಯಾಣಕ್ಕಾಗಿಯೇ ವಿನಃ ಸ್ವಾರ್ಥಕ್ಕಾಗಿ ಅಲ್ಲ. ನೀವು ಅದನ್ನು ಸ್ವಂತ ಲಾಭಕ್ಕಾಗಿ ಉಪಯೋಗಿಸಿಕೊಂಡ್ರಿ...'

ಕೆಂಪು, ಕೆಂಪಾಯಿತು ಮುಖ!

ಎಂತಹ ಅವಮಾನ? ಇದೇ ಮಾತನ್ನು ಬೇರೆ ಯಾರೇ ಆಡಿದ್ದರೂ ಸಹ ರುದ್ರನಾಗ ಅವರನ್ನು ಸುಮ್ಮನೆ ಬಿಡುತ್ತಿರಲಿಲ್ಲ. ಎಂತಹ ಉದ್ಧಟತನ? ಮಾಂತ್ರಿಕನನ್ನೇ ಅವಮಾನಿಸುತ್ತಿದ್ದಾನೆ.

ರುದ್ರನಾಗ 'ಮದಂತ... ಮಾತಾಡುವ ಮುನ್ನ ನಾಲಿಗೆ ನಿನ್ನ ಹಿಡಿತದಲ್ಲಿ ಇರಲಿ'

'ಸತ್ಯ ಅಪ್ರಿಯ ಗುರುಗಳೆ'

'ಸತ್ಯ. ಏನದು?'

ಮದಂತ 'ಕೇವಲ ದುಡ್ಡಿನ ಆಸೆಯಿಂದ ನೀವು ಸಂಬಂಧದ ಬಗ್ಗೆ ಚಿಂತಿಸದೆ ಮಾನವೀಯತೆಯನ್ನು ಸಹ ಮರೆತು ಪ್ರಯೋಗ ಮಾಡುತ್ತಿದ್ದೀರಿ. ಆದರೆ ಪರಿಣಾಮ ಏನಾಯಿತು? ನಿಮ್ಮ ಹೆಂಡತಿ ಮತ್ತು ಮಕ್ಕಳ ಮೇಲೆ ನಿಮಗೆ ಗೊತ್ತಿಲ್ಲದಂತೆ ನಿಮ್ಮ ಸಹಾಯದಿಂದ ಪ್ರಯೋಗ ನಡೆಯಿತು'

ರುದ್ರನಾಗ ಕೋಪದಿಂದ 'ಅದಕ್ಕೆ ಕಾರಣ ನನ್ನ ತಂಗಿಯ ಗಂಡನ ಮೋಸ... ಕುತಂತ್ರ...'

ಮದಂತ 'ಕಾರಣ ಯಾರೇ ಆಗಿರಲಿ. ನಮಗೆ ಈ ರಹಸ್ಯ ತಿಳಿಯಲಿಲ್ಲ. ನಾವು ಮಾಂತ್ರಿಕರು ನಿಜ. ಆದರೆ ನಮ್ಮ ಭವಿಷ್ಯ ನಮಗೇ ತಿಳಿದಿಲ್ಲ.'

ರುದ್ರನಾಗ ಕೋಪದಿಂದ ಬುಸುಗುಡುತ್ತಿದ್ದಾನೆ. ಅವನ ಕಣ್ಣುಗಳು ಕೆಂಡ ಕಾರುತ್ತಿವೆ.

ಮದಂತ 'ನೀವು ಮಾಂತ್ರಿಕ ವಿದ್ಯೆಯಲ್ಲಿ ತುಂಬಾ ಸಾಧನೆ ಮಾಡಿದ್ದೀರ. ಆದರೆ ನಿಮ್ಮ ಪ್ರೀತಿಯ ಹೆಂಡತಿ ಮತ್ತು ಮಕ್ಕಳ ಮೇಲೆ ಕ್ಷುದ್ರ ಶಕ್ತಿಯ ಪ್ರಯೋಗ ಆಯಿತು. ನೀವು ಅಲ್ಲಿಯೇ ಇದ್ದರೂ ಸಹ ನಿಮಗೆ ಅದರ ಅರಿವು ಇರಲಿಲ್ಲ. ಇದು ನಿಜವಾಗಿಯೂ ದುರಂತವೇ ಸರಿ'

ರುದ್ರನಾಗ 'ಮನೋಹರನ ಮೋಸದಿಂದ ನನ್ನ ಹೆಂಡತಿ, ಮಕ್ಕಳು ಸತ್ತರು... ನೀನು ಇದರ ಬಗ್ಗೆ ತಲೆಕೆಡಿಸಿಕೊಳ್ಳಬೇಡ'

ಮದಂತ ಮೌನವಾಗಿದ್ದ

ರುದ್ರನಾಗ 'ಉಳಿದ ಸಂಗತಿಗಳು ನನಗಿರಲಿ. ಏಳು... ಬೇಗ ಏಳು... ಇವತ್ತು ರಾತ್ರಿಯೇ ನೀನು ಕೈಕರಣ ಮಾಡಬೇಕು'

'ಅದು ಅಸಾಧ್ಯ ಗುರುಗಳೆ...'

'ಮದಂತ...'

'ನನ್ನನ್ನು ಕ್ಷಮಿಸಿ ಗುರುಗಳೆ...'

ರುದ್ರನಾಗ 'ಮದಂತ...'